

# ಓದುಗರಿಗೆ

**ಕನ್ನಡಕ್ಕೆ: ಶ್ರೀನಿವಾಸರಾಜು ದೊಡ್ಡೇರಿ**

ನನ್ನ ಅಭಿಮಾನಿ ಓದುಗರಿಗೆ, ಕುತೂಹಲದಿಂದಲೋ, ಆಸಕ್ತಿಯಿಂದಲೋ ನನ್ನ ಬರಹಗಳನ್ನು ಓದಬಯಸುವವರಿಗೆ ನಾನು ಹೇಳುವುದಿಷ್ಟೆ:

ಯಾವುದೇ ಒಂದು ವಿಚಾರವನ್ನು ಆಳವಾಗಿ ಅಭ್ಯಾಸ ಮಾಡಿ ಬರವಣಿಗೆ ಮಾಡುವುದಾಗಲಿ, ಕ್ರಮಬದ್ಧವಾಗಿ ಮಂಡಿಸುವುದಾಗಲಿ ನನ್ನ ಉದ್ದೇಶ ಅಲ್ಲವೇ ಅಲ್ಲ. ಈ ಬದುಕಿನಲ್ಲಿ ನಿಜವನ್ನರಸುತ್ತ ಎಷ್ಟೋ ಹಳೆಯ ವಿಚಾರಗಳನ್ನು ನಾನು ಬಿಟ್ಟುಕೊಟ್ಟಿದ್ದೇನೆ; ಹೊಸ ಸಂಗತಿಗಳನ್ನು ಕಲಿತುಕೊಂಡಿದ್ದೇನೆ. ನಾನೊಬ್ಬ ದೊಡ್ಡ ಚಿಂತಕ ಹೌದೋ ಅಲ್ಲವೋ ಎನ್ನುವುದರಲ್ಲಿ ಅಥವಾ ನನ್ನ ಕಣ್ಮರೆಯ ಬಳಿಕ ನಾನು ಪ್ರತಿಪಾದಿಸುವ ವಿಚಾರಗಳು ಇರುತ್ತವೋ ಇಲ್ಲವೋ ಎನ್ನುವುದರಲ್ಲಿ ನನಗೆ ಸ್ವಲ್ಪವೂ ಆಸಕ್ತಿಯಿಲ್ಲ.

ನಂಬಿದ ದೇವರಿಗೆ, ಕಾಲ ಕಾಲಕ್ಕೆ ನಾನು ಕಂಡುಕೊಂಡ ಸತ್ಯಗಳಿಗೆ ಮತ್ತು ನನ್ನ ಅಂತಃಸಾಕ್ಷಿಗೆ ಬದ್ಧನಾಗಿ ಮಾತ್ರವೇ ನಾನು ನಡೆದುಕೊಂಡಿದ್ದೇನೆ ಎಂಬುದನ್ನು ಓದುಗರು ಮರೆಯದಿರಲಿ. ಅಲ್ಲದೆ ನಾನು ಪ್ರತಿಪಾದಿಸುವ ವಿಚಾರಗಳಲ್ಲಿ ವೈರುಧ್ಯವೇನಾದರೂ ಕಂಡುಬಂದಲ್ಲಿ, ಮೊದಲ ಹಂತದ ವಿಚಾರಗಳನ್ನು ಕೈಬಿಟ್ಟು ಎರಡನೆಯ ಹಂತದವನ್ನಷ್ಟೇ ಪರಿಗಣನೆಗೆ ತೆಗೆದುಕೊಳ್ಳಲಿ.

(ಹರಿಜನ್‌, 29.04.1933)

# ಅಹಿಂಸೆ ಮತ್ತು ಚರಕದ ಕಲ್ಪನೆ

ಅಹಿಂಸೆ ಎಂಬುದು ಮೇಲಿನಿಂದ ಇಳಿದದ್ದೇನಲ್ಲ. ಅದು ಈ ನೆಲದಿಂದಲೇ ಮೂಡಿದ್ದು. ಅಹಿಂಸೆಯು ಒಳ್ಳೆಯ ಪ್ರತಿಫಲವನ್ನು ಕೊಡಬಲ್ಲದು ಎಂದಾದರೆ, ಆ ಪ್ರತಿಫಲವನ್ನು ನಾನು ಇಲ್ಲೇ ಈ ಜನ್ಮದಲ್ಲೇ ಕಾಣಬಯಸುವೆ!

ಆಯುಧಗಳು ಹಿಂಸೆಯನ್ನು ಪ್ರತಿನಿಧಿಸುವಂತೆ ಚರಕವು ಅಹಿಂಸೆಯನ್ನು ಪ್ರತಿನಿಧಿಸುತ್ತದೆ. ಆದರೆ ಅಹಿಂಸೆಯು ನೈತಿಕ ಬಲದಿಂದಲ್ಲದೆ ಶೂನ್ಯದಲ್ಲಿ ಹುಟ್ಟಿಕೊಳ್ಳುವುದು ಸಾಧ್ಯವಿಲ್ಲವಲ್ಲ?! ಹಾಗಾಗಿ ನೈತಿಕ ಬಲವನ್ನು ನಾವು ಚರಕಕ್ಕೆ ಧಾರೆ ಎರೆಯಬೇಕಿದೆ.

ಒಂದು ಹೋಲಿಕೆ ಕೊಡುವೆ. ನೀವು ಯಾರಾದರೂ ದೊಡ್ಡವರ ಮನೆಗೆ ಭೇಟಿ ಕೊಟ್ಟು ನೋಡಿ–ಅವರ ನಡುಮನೆಗಳಲ್ಲೇ ಹುಲಿಯ ಚರ್ಮ, ಜಿಂಕೆಯ ಕೋಡು, ಕತ್ತಿ ಕಠಾರಿ ಬಂದೂಕು ಮುಂತಾದವನ್ನು ತೂಗುಹಾಕಿರುತ್ತಾರೆ. ನಾನು ಶಿಮ್ಲಾದ ರಾಷ್ಟ್ರಪತಿ ನಿವಾಸಕ್ಕೂ ಹೋಗಿದ್ದೇನೆ, ಇಟಲಿಯ ಮುಸೊಲಿನಿಯ ನಿವಾಸಕ್ಕೂ ಹೋಗಿದ್ದೇನೆ. ಅಲ್ಲೆಲ್ಲ ನನಗೆ ಆಯುಧಗಳಿಂದ ಗೋಡೆಗಳನ್ನು ಸಿಂಗರಿಸಿರುವುದು ಕಂಡುಬಂದಿದೆ. ಈ ಸ್ಥಳಗಳಿಗೆಲ್ಲ ನಾನು ಭೇಟಿ ಕೊಟ್ಟಾಗ